ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... Increasing Impounding Capacity of Allasandra Lake ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(71)

ಸಲ್ಲಿಸಿದೆ,

ವಿಷಯ:– **Increasing the Impounding Capacity of Allasandra Lake and allied works** ಎಂಬುವ ಕಾಮಗಾರಿಯ ಮಾರ್ಪಾಟು ಅಂದಾಜು ಪಟ್ಟಿ, ವರ್ಕ್ ಸ್ಲಿಪ್, ಇ.ಐ.ಆರ್.ಎಲ್ ಮತ್ತು ಕಾಲಾವಿಸ್ತರಣೆಗೆ ಅನುಮೋದನೆ ನೀಡುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಯಲಹಂಕ ವಲಯದ ವಾರ್ಡ್ ನಂ.5ರಲ್ಲಿ ಯೋಜನಾ ವಿಭಾಗದಿಂದ ಸದರಿ ಕಾಮಗಾರಿಗೆ ಮಾನ್ಯ ಆಯುಕ್ತರವರು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು ಮಾನ್ಯ ಮುಖ್ಯ ಅಭಿಯಂತರರು, ಯಲಹಂಕ ವಲಯ ಬಿಬಿಎಂಪಿ ರವರು ಸಂಖ್ಯೆ:ಬಿಬಿಎಂಪಿ/ಯವ/ಮುಅ/ತಾ.ಮಂ/07/12–13 ದಿನಾಂಕ:05.05.2012 ರಂದು ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ದಿನಾಂಕ:24.08.2012ರಲ್ಲಿ ರೂ.200.00 ಲಕ್ಷಗಳಿಗೆ ಕೈಗೆತ್ತಿಕೊಳ್ಳಲಾಗಿದೆ. ಸದರಿ ಕಾಮಗಾರಿಗೆ **P2092** ಎಂಬುವ ಶೀರ್ಷಿಕೆಯಡಿಯಲ್ಲಿ ಕಾಮಗಾರಿ ಸಂಖೇತ ಸಂಖ್ಯೆ: **004-12-000041** ರೂ.200.00 ಲಕ್ಷಗಳು ದೊರೆತಿರುತ್ತದೆ. ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಮಂಜೂರಾತಿ ದೊರೆತ ನಂತರ **e-procurement** ಮುಖಾಂತರ ಟೆಂಡರ್ ನೋಟಿಫಿಕೇಶನ್ ದಿನಾಂಕ:26.04.2012 ರಂದು ಹೊರಡಿಸಲಾಗಿತ್ತು. ಅದರಂತೆ, 3 ಜನ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಗುತ್ತಿಗೆದಾರರಾದ ಮೆ॥ಪರಿಚಿತ ಕನ್ಸ್ಟ್ರಕ್ಷನ್ಸ್ ರವರಿಗೆ ಮೇಲ್ಕಂಡ ಕಾಮಗಾರಿಯು ಟೆಂಡರ್ ಮೊತ್ತ ರೂ.1,73,72,872 ಗಳಿಗೆ ಮತ್ತು 2012–13ನೇ ಸಾಲಿನ ಪಿಡಬ್ಲ್ಯೂಡಿ ದರಪಟ್ಟಿಯಂತೆ ಶೇ.–11.23% ರಷ್ಟು ಕಡಿಮೆ ಇರುವ ಟೆಂಡರ್‌ನ್ನು ಅನುಮೋದಿಸಲಾಗಿರುತ್ತದೆ.

(72)

ಮುಂದುವರೆದಂತೆ, ಸದರಿ ಕಾಮಗಾರಿ ನಿರ್ವಹಣೆಯ ಸಮಯದಲ್ಲಿ ಕೆಲವೊಂದು ಪರಿಮಾಣವು ಅನುಮೋದನೆಗೊಂಡ ಪರಿಮಾಣಕ್ಕಿಂತ ಅಧಿಕವಾಗಿರುವ ಕಾರಣ ಸದರಿ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿ ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಮಾರ್ಪಾಟು ಅಂದಾಜು ಪಟ್ಟಿಯನ್ನು ತಯಾರಿಸಿದೆ.

1 Earthwork excavation
2 Providing and laying in position plain cement concrete of mix M10 with OPC Cement
3 Providing and laying cement concrete using 20mm and down size granite jelly
4 Providing & fabricating TMT steel
5 Providing and removing centering, shuttering, strutting, propping etc.,
6 Filling available excavated earth
7 Earthwork excavation for foundation
8 Clearing grass and removal of rubbish
9 Size stone masonry in foundation with cement mortar 1:8, stone
10 Size stone masonry in basement with cement mortar 1:8,
11 Providing ruled pointing
12 Supplying and fixing M.S. Rectangular poles
13 Providing and fixing M.S. Block pipe of 38mm dia,
14 Providing chain link fencing 50mm
15 M.S. Angles 50x50x5mm
16 Providing and laying heavy duty cobble stones 65mm thick
17 Providing Ceramic tiles

ವಿಷಯ : Increasing the Impounding of Allasandra lake

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

18 Providing and fixing Pre cast solid concrete kerb stones made out of CC 1:2:4
19 Painting two coats after filling the surface with synthetic enamel paint
20 Providing and applying two coats of ready mix paint of
21 Construction of Embankment
22 Providing and laying Pitching on slopes
23 Manufacturing, supplying & fixing on position MS Grill
24 Providing and laying reinforced cement concrete pipe NP2
25 KSRB 15-18.2 : Providing and applying enamel metal paint two coats

73 ಅದರಂತೆ, ಸದರಿ ಕಾಮಗಾರಿಯ ಮೂಲ ಅಂದಾಜು ಪಟ್ಟಿಯನ್ನು ಮಾರ್ಪಾಟುಗೊಳಿಸಿ ಅಂದಾಜು ಪಟ್ಟಿಯ ಆಡಳಿತಾತ್ಮಕ ಅನುಮೋದನೆ ಮೊತ್ತ ರೂ.2,00,00,000.00 ಗಳು ಮೀರದಂತೆ ಮಾರ್ಪಾಟು ಅಂದಾಜು ಪಟ್ಟಿಯನ್ನು ರೂ.1,51,00,000.00 ಗಳಿಗೆ ತಯಾರಿಸಿರುತ್ತಾರೆ ಈ ಮೂಲ ಮಾರ್ಪಾಟು ಅಂದಾಜು ಪಟ್ಟಿಯ ತಯಾರಿಕೆಯಿಂದ ರೂ.2,00,00,000.00 – ರೂ.1,53,00,000.00= ರೂ.47,00,000.00 ಉಳಿತಾಯವಾಗುತ್ತದೆ ಹಾಗೂ ಮೂಲ ಟೆಂಡರ್ ಮೊತ್ತವಾದ ರೂ.1,73,72,872.00 ಗಳ ವೆಚ್ಚಕ್ಕೆ ಈಗ ಹಾಲಿ ಕಾಮಗಾರಿ ವೆಚ್ಚವು ರೂ.1,36,09,385.00 ಗಳಾಗಿದ್ದು ರೂ.1,73,72,872.00 – ರೂ.1,36,09,385.00 = ರೂ. 37,63,487.00 ಮೊತ್ತ ಉಳಿಕೆಯಾಗುತ್ತಿರುತ್ತದೆ.

ಸದರಿ ಮೂಲ ಅಂದಾಜು ಪಟ್ಟಿಯಲ್ಲಿ ಈಗ ಅಳವಡಿಸಿರುವ ಇ.ಐ.ಆರ್.ಎಲ್ ಅಂಶಗಳು ಇಲ್ಲದೇ ಇದ್ದು, ಹಾಗೂ ಅಳ್ಳಾಳಸಂದ್ರ ಕೆರೆಯ ಉದ್ಘಾಟಣೆ ಸಮಾರಂಭಕ್ಕಾಗಿ ಹಾಗೂ ಕೆರೆಗೆ ಕೊಳಚೆ ನೀರು ಹರಿದು ಬರುತ್ತಿದ್ದು, ಅದನ್ನು ತಡೆಯಲು ಏರಿ ನಿರ್ಮಿಸಬೇಕಾಗಿದ್ದು ಹಾಗೂ ಏರಿಗೆ ಕಲ್ಲಿನ ಪಿಚಿಂಗ್ ಅಳವಡಿಸಲು ಮತ್ತು ಕೆರೆಯ ಸುತ್ತ ಅಳವಡಿಸಿರುವ ಚೈನ್‌ಲಿಂಕ್ ಫೆನ್ಸಿಂಗ್ ಮತ್ತು ಗ್ರೀಲ್ ತುಕ್ಕುಯಿಡಿಯುತ್ತಿದ್ದರಿಂದ ಈ ಅಂಶಗಳು ಅತ್ಯವಶ್ಯಕವಾಗಿರುತ್ತದೆ.

ಸದರಿ ಮೇಲೆ ತಿಳಿಸಿದ ಇ.ಐ.ಆರ್.ಎಲ್ ಅಂಶಗಳನ್ನು ಕೈಗೊಂಡಿದ್ದರಿಂದ ಕಾಮಗಾರಿಯನ್ನು ನಿಗಧಿ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಿರುವುದಿಲ್ಲ ಹಾಗೂ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ದಿನಾಂಕ:30.06.2015 ರವರೆಗೂ ಒಟ್ಟು 672 ದಿನಗಳ ಕಾಲ ವಿಸ್ತರಣೆಯನ್ನು ನೀಡಲು ಶಿಫಾರಸ್ಸು ಮಾಡಿದೆ.

ಮುಂದುವರೆದಂತೆ, ಮೇಲೆ ತಿಳಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸದರಿ ಕಡತವನ್ನು ಮಂಡಿಸುತ್ತ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡಲು ಕೋರಿದೆ.

74 1. ಸದರಿ **Increasing the Impounding Capacity of Allasandra Lake and allied works** ಎಂಬ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ರೂ.2,00,00,000.00 ಗಳಿಗೆ ಪಡೆಯಲಾಗಿದ್ದು ಸದರಿ ಮೂಲ ಅಂದಾಜು ಪಟ್ಟಿಯ ಮೊತ್ತ ರೂ.2,00,00,000.00 ಗಳಿಗೆ ಮೀರದಂತೆ ಹಾಗೂ ಅನುಮೋದಿತ ಟೆಂಡರ್ ಮೊತ್ತ ರೂ.1,73,72,872.00 ಗಳಿಗೆ ಮೀರದಂತೆ ರೂ.1,53,00,000.00 ರಲ್ಲಿ ಕಾಮಗಾರಿ ನಿರ್ವಹಿಸಲು ಉದ್ದೇಶಿಸಿ ತಯಾರಿಸಲಾಗಿರುವ ಮಾರ್ಪಾಟು ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ, ವರ್ಕ್ ಸ್ಲಿಪ್ ಮತ್ತು ಇ.ಐ.ಆರ್.ಎಲ್ ಗೆ ಅನುಮೋದನೆ ಕೋರಿದೆ.

75 2. ಸದರಿ ಕಾಮಗಾರಿಯನ್ನು ಪೂರ್ಣಗೊಳುಸಲು 672 ದಿನಗಳ ಕಾಲ ವಿಸ್ತರಣೆಯನ್ನು ನೀಡಲು ಅನುಮೋದನೆ ಕೋರಿದೆ.

10/9/2014

76 ಸ.ಅ (ಯೋ.ಉ.ವಿ)

Shivaraj, Typist
pl. take dictation.

ಸ.ಕಾ.ನಿ.ಅ(ಯೋ.ಉ.ವಿ)

10/9/2014

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ಸಲ್ಲಿಸಿದೆ,
78	ಕಂಡಿಕೆ (71) ರಿಂದ (75) ರವರೆಗಿನ ಸ.ಕಾ.ನಿ.ಅ (ಯೋ.ಉವಿ) ರವರ ವರದಿಯನ್ನು ಪರಾಂಭರಿಸಬಹುದಾಗಿರುತ್ತದೆ.
	"Increasing the Impounding Capacity of Allasandra Lake and allied works" ಎಂಬ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಕೈಗೆತ್ತಿಕೊಂಡು ಮೆ॥ಪರಿಚಿತ ಕನ್ಸ್‌ಟ್ರಕ್ಷನ್ಸ್‌ರವರಿಗೆ ಶೇ.–11.23% ರಷ್ಟು ಅಂದಾಜು ಪಟ್ಟಿಯ ಮೊತ್ತಕ್ಕಿಂತ ಕಡಿಮೆ ಮೊತ್ತವಾದ ರೂ.1,73,72,872.00 ಗಳಿಗೆ ಕಾರ್ಯದೇಶವನ್ನು ನೀಡಲಾಗಿರುತ್ತದೆ.
79	ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ಪ್ರರಂಭಿಸಿದ ಸಮಯದಲ್ಲಿ ಕೆಲವೊಂದು ಅಂದಾಜು ಪಟ್ಟಿಯಲ್ಲಿನ ಅಂಶಗಳಲ್ಲಿ ವ್ಯತ್ಯಾಸ ಉಂಟಾಗಿ ಕೆರೆಯ ಆಳವನ್ನು ಮತ್ತಷ್ಟು ಹೆಚ್ಚಿಸಲು ಮಾಡಿಕೊಳ್ಳಲಾಗಿದ್ದ, ಗರಿಷ್ಠ ಪ್ರಮಾಣವಾದ 1,08,000.00 ಗಳ ಬದಲಾಗಿ 54,000.00 ಘನಮೀಟರ್ ಮಾತ್ರ ಕಾಮಗಾರಿಯನ್ನು ನಿರ್ವಹಿಸಲು ಸಾಧ್ಯವಾಗಿರುತ್ತದೆ. ಈ ಒಂದೇ ಅಂಶದಲ್ಲಿ ರೂ.59,94,000.00 ಉಳಿತಾಯವಾಗಿದ್ದು, ಸದರಿ ಮಣ್ಣು ಆಗೆತವನ್ನು ಈಗಾಗಲೇ ನಿರ್ಮಿಸಲಾಗಿದ್ದ, ಕೆರೆಯ ಏರಿ ಪ್ರದೇಶಕ್ಕೆ ಕೊಂಡ್ಯೋಯಲು ಸಾಧ್ಯವಾಗದೇ ಇರುವ ಕಾರಣ **(Deep Excavation could not be executed very near to the already existing Earthern Embankment of the Tank. This resulted in Earthwork excavation item to shortfall from the proposed Qty of earthwork).**
80	ಇದೇ ರೀತಿ ಸದರಿ ಅಳ್ಳಾಳಸಂದ್ರ ಗ್ರಾಮದ ಪಕ್ಕದಲ್ಲಿ ಇದ್ದಂತಹ ಒತ್ತುವರಿ ಪ್ರದೇಶದಿಂದ ಜನರು ವಿಸ್ತೀರ್ಣಗೊಳ್ಳುವುದನ್ನು ತಡೆಯಲು ಉಕ್ಕಿನ ಸರಳಿನ ತಡೆ ಗೋಡೆಯನ್ನು **(Steel Structures preventing further encroachments by slum dwellers)** ಅಂಶವನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದ್ದು, ಸರ್ಕಾರದ ಕಂದಾಯ ಇಲಾಖೆಯು, ಪೋಲೀಸ್ ಇಲಾಖೆಯ ನೇರವಿನಿಂದ ಒತ್ತುವರಿಯನ್ನು ಯಶಸ್ವಿಯಾಗಿ ತೆಗೆದು ಹಾಕಿದ ಕಾರಣ ಸದರಿ ಜಾಗದಲ್ಲಿ ಉಕ್ಕಿನ ತಡೆಗೋಡೆಯನ್ನು ನಿರ್ಮಿಸುವುದು ಅಗತ್ಯತೆ ದೂರವಾಗಿರುತ್ತದೆ. ಈ ನಿಟ್ಟಿನಲ್ಲಿ ಸದರಿ ಅಂಶದಲ್ಲಿಯೂ ರೂ.8,55,000.00 ಗಳು ಉಳಿತಾಯವಾಗಿರುತ್ತದೆ. ಈ ರೀತಿಯ ಇತರೆ ಸಣ್ಣಪುಟ್ಟ ಅಂಶಗಳಲ್ಲಿಯೂ ಅನುಮೋದಿತ ಅಂದಾಜು ಪಟ್ಟಿಯಲ್ಲಿ ಉಳಿತಾಯವಾಗಿದ್ದು, ಒಟ್ಟು ಉಳಿತಾಯ ಮೊತ್ತ ರೂ.70,01,884.00 ಗಳಾಗಿರುತ್ತದೆ.
81	ಆದೇ ರೀತಿ ಕಾಮಗಾರಿಯನ್ನು ನಿರ್ವಹಿಸುವ ಸಂಧರ್ಭದಲ್ಲಿ ಕೆರೆಯಿಂದ ತೆಗೆಯಬಹುದಾದ ಗುಣಮಟ್ಟದ ಮಣ್ಣಿನ ಪ್ರಮಾಣದಲ್ಲಿ ಕಡಿಮೆಯಾಗಿ ಹೊರ ಪ್ರದೇಶದಿಂದ ಸುಮಾರು 2620.80 ಘನಮೀಟರ್ ಮಣ್ಣನ್ನು ತರಲಾಗಿದ್ದು, ಹಾಗೆಯೇ ಹೊಸದಾಗಿ **Sedimentation Portion** ನಿರ್ಮಿಸಲು ಕೆರೆ ಏರಿಯನ್ನು **Pitching** ಸಹಾಯದಿಂದ ನಿರ್ಮಿಸಿ ಅದಕ್ಕೆ **Concrete NP2 pipe** ಗಳನ್ನು ಅಳವಡಿಸಿ ಮತ್ತು ಇತರೇ ಸಣ್ಣಪುಟ್ಟ ಅಂದಾಜು ಪಟ್ಟಿಯಲ್ಲಿ ಅನುಮೋದನೆಗೊಳ್ಳದ ಅಂಶಗಳನ್ನು ನಿರ್ವಹಿಸಿದ ಕಾರಣ ಒಟ್ಟು ಗರಿಷ್ಠ **EIRL** ಮೊತ್ತವು ಮತ್ತು ಹೆಚ್ಚುವರಿ ಅಂಶಗಳ ಮೊತ್ತವು ರೂ.32,38,397.00 ಗಳಾಗಿರುತ್ತದೆ.
	ಈ ಎರಡು ಅಂಶಗಳಾದ ಉಳಿತಾಯ ಮತ್ತು ಹೆಚ್ಚುವರಿ ಮೊತ್ತವನ್ನು ತುಲನಾತ್ಮಕ ಪಟ್ಟಿಯಲ್ಲಿ ತೋರಿಸಲಾಗಿದ್ದು, ಒಟ್ಟು ಕಾಮಗಾರಿಯ ನಿರ್ವಹಣೆಯಲ್ಲಿ ರೂ.37,63,487.00 ಉಳಿತಾಯವಾಗಿರುತ್ತದೆ.
82	ಸದರಿ ಉಳಿತಾಯ ಮೊತ್ತದಲ್ಲಿಯೇ ವ್ಯತ್ಯಾಸ ಮಾಡಿಕೊಂಡು ನಿರ್ವಹಿಸಲಾದ ಹೆಚ್ಚುವರಿ ಅಂಶಗಳು ಹಾಗೂ ಪ್ರಮಾಣದ ಕಾಮಗಾರಿಯನ್ನು ಸರಿದೂಗಿಸಲಾಗಿದ್ದು, ಒಟ್ಟಿನಲ್ಲಿ ರೂ.37,63,487.00 ಗಳು ಉಳಿತಾಯವಾಗಿರುತ್ತದೆ.

ವಿಷಯ : Encroachment and Impundig of Allotment Letter.

ಪುಟದ ಸಂಖ್ಯೆ 39

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
83	ಸದರಿ ಕಾಮಗಾರಿಯ ನಿರ್ವಹಣೆಯನ್ನು ಮಳೆಗಾಲದಲ್ಲಿ ಕೈಗೊಳ್ಳಲು ಸಾಧ್ಯವಾಗದೇ ಇರುವ ಕಾರಣ ಹಾಗೂ ಬೆಂಗಳೂರು ಜಲ ಮಂಡಳಿಯವರು ಕೆರೆಗೆ ಸೇರುತ್ತಿದ್ದ, ಕಲುಷಿತ ನೀರನ್ನು ಪೈಪ್‌ಗಳ ಮುಖಾಂತರ ಪ್ರತ್ಯೇಕವಾಗಿ ತೆಗೆದುಕೊಂಡು ಹೋಗುವ ಕಾಮಗಾರಿಯನ್ನು ಇತ್ತೀಚೆಗೆ ನಿರ್ವಹಿಸದ ಕಾರಣ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದಲೇ ಕೆರೆಯ ಪಕ್ಕದಲ್ಲಿ ಖಾಸಗಿ ಜಮೀನನ್ನು ಬಿಡಿಸಿಕೊಡಲು ಮತ್ತು ತತ್ವಿಕವಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಹೆಚ್ಚಿನ ಸಮಯ ತೆಗೆದುಕೊಂಡ ಕಾರಣ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಳಂಭವಾಗಿರುತ್ತದೆ. ಸದರಿ ವಿಳಂಭಕ್ಕೆ ಗುತ್ತಿಗೆದಾರರು ಕಾರಣವಾಗಿಲ್ಲದ ಕಾರಣ ಗುತ್ತಿಗೆದಾರರಿಗೆ ದಂಡ ರಹಿತವಾಗಿ ದಿನಾಂಕ:30.06.2015 ರವರೆಗೂ ಕಾಲ ವಿಸ್ತರಣೆ ನೀಡಬಹುದಾಗಿರುತ್ತದೆ. ಆದ್ದರಿಂದ, ಸದರಿ ಕಡತವನ್ನು ಮಂಡಿಸುತ್ತ ಕೆಳಕಂಡ ಅಂಶಗಳಿಗೆ ಅನುಮೋದನೆಯನ್ನು ಕೋರಿದೆ. 84 1. ಸದರಿ ಕಾಮಗಾರಿಯಲ್ಲಿ ಉಳಿತಾಯವಾಗಿರುವ ಮೊತ್ತದಲ್ಲಿ ನಿರ್ವಹಿಸಲಾದ ಹೆಚ್ಚುವರಿ ಪ್ರಮಾಣ ಮತ್ತು ಕೆಲವೊಂದು EIRL ಅಂಶಗಳನ್ನು ನಿರ್ವಹಿಸಿದ ಕ್ರಮವನ್ನು ಸ್ಥಿರೀಕರಿಸಿ ತಯಾರಿಸಲಾಗಿರುವ ಮಾರ್ಪಾಟು ಅಂದಾಜು ಪಟ್ಟಿಗೆ ಅನುಮೋದನೆ ಕೋರಿದೆ. 2. ಸದರಿ ಕಾಮಗಾರಿಗಾಗಿ ತಯಾರಿಸಲಾಗಿರುವ ಮಾರ್ಪಾಟಿತ ಶೆಡ್ಯೂಲ್-ಬಿಅನ್ನು ಅನುಮೋದಿಸಲು ಕೋರಿದೆ. 3. ಸದರಿ ಕಾಮಗಾರಿಯಲ್ಲಿ ನಿರ್ವಹಿಸಲಾದ ಹೆಚ್ಚುವರಿ ಪ್ರಮಾಣ, EIRL ಪರಿಕರಗಳನ್ನು ಟೆಂಡರ್ ಗುತ್ತಿಗೆದಾರರಿಂದಲೇ ನಿರ್ವಹಿಸಿದ ಕ್ರಮವನ್ನು ಸ್ಥಿರೀಕರಿಸಲು ಕೋರಿದೆ. 4. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಮೇಲೆ ತಿಳಿಸಿದ ಕಾರಣಗಳಿಂದಾಗಿ ವಿಳಂಬವಾಗಿದ್ದು, ದಿನಾಂಕ:30.06.2015ರವರೆಗೂ ದಂಡ ರಹಿತವಾಗಿ ಕಾಲ ವಿಸ್ತರಣೆ ನೀಡಲು ಅನುಮೋದನೆ ಕೋರಿದೆ. ಕಾ.ಪಾ.ಅ (ಯ-ಯೋ) 19/09/2014 85 ಮುಖ್ಯ ಅಭಿಯಂತರರು (ಯವ) Chief Engineer Yelahanka Zone Bruhath Bangalore Mahanagara Bangalore 92